DVG – (13)


**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಚೇರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು**

# 1540 , ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು–570023, ದೂರವಾಣಿ: 0821-2560275, ಇ–ಮೇಲ್–trimysore@gmail.com


**ಸಂ:ಟಿಆರ್ಐ/ಮೈ/ಸಂವಿ/ಸಿಆರ್–64/2019–20** **ದಿನಾಂಕ: 30/05/2022**

**– : ಅಧಿಕೃತ ಜ್ಞಾಪನ : –**

ವಿಷಯ:– ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ–ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯಗಳು ಮತ್ತು ಕಾಡಿನಲ್ಲಿ ವಾಸಿಸುವ ಇತರೆ ಪಾರಂಪರಿಕ ಬುಡಕಟ್ಟು ಸಮುದಾಯಗಳ ಕುರಿತು ಸಂಶೋಧನಾ ಅಧ್ಯಯನ ಕಾರ್ಯದ ಅಂತಿಮ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ:–1. ಈ ಕಚೇರಿಯ ದಿನಾಂಕ: 12/11/2020 ಮತ್ತು 21/04/2021ರ ಸಮಸಂಖ್ಯೆ ಅಧಿಕೃತ ಜ್ಞಾಪನಾ ಪತ್ರಗಳು

2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ಸಂಖ್ಯೆ ಡಿವಿ 6/95/ಕೆಎಸ್‌ಟಿಆರ್ಐ/ಮೈ–2/2020–21, ದಿನಾಂಕ: 13/04/2022.

*********

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ **ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ–ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯಗಳು ಮತ್ತು ಕಾಡಿನಲ್ಲಿ ವಾಸಿಸುವ ಇತರೆ ಪಾರಂಪರಿಕ ಬುಡಕಟ್ಟು ಸಮುದಾಯಗಳ ಕುರಿತು ಸಂಶೋಧನಾ ಅಧ್ಯಯನ** ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕೈಗೊಳ್ಳಲಾಗಿದ್ದು, ಈ ಅಧ್ಯಯನ ಕಾರ್ಯಕ್ಕಾಗಿ ಉಲ್ಲೇಖ (2)ರ ಈ ಕಚೇರಿಯ ಅಧಿಕೃತ ಜ್ಞಾಪನದನ್ವಯ ಎರಡು ಕಂತುಗಳಲ್ಲಿ ರೂ. 7.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು ಹಾಗೂ ಅಧ್ಯಯನ ಅವಧಿಯನ್ನು 02 ಬಾರಿ ಹೆಚ್ಚುವರಿಯಾಗಿ 12 ತಿಂಗಳು ವಿಸ್ತರಣೆಗೆ ಅನುಮತಿ ನೀಡಲಾಗಿತ್ತು.

ಉಲ್ಲೇಖ (2)ರ ಪತ್ರದಲ್ಲಿ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು, ಅಧ್ಯಯನ ಕಾರ್ಯ ಪೂರ್ಣಗೊಂಡಿರುವುದಾಗಿ ತಿಳಿಸಿ, ಅಂತಿಮ ವರದಿಯ ಆಂಗ್ಲ ಭಾಷೆಯ 02 ಪ್ರತಿಗಳನ್ನು ಈ ಕಚೇರಿಗೆ ಸಲ್ಲಿಸಿ, ಅಂತಿಮ ಕಂತಿನ ಅನುದಾನವನ್ನು ಬಿಡುಗಡೆ ಮಾಡಿಕೊಡಲು ಕೋರಿರುತ್ತಾರೆ. ಅವರು ಈ ಕಚೇರಿಯೊಂದಿಗೆ ದಿನಾಂಕ: 02/11/2020 ರಂದು ಮಾಡಿಕೊಂಡಿರುವ ಒಡಂಬಡಿಕೆಯಲ್ಲಿನ ಕ್ರ.ಸಂ. 03 ರಂತೆ, ಅಧ್ಯಯನ ಕಾರ್ಯಕ್ಕೆ ಮಂಜೂರು ಮಾಡಿರುವ ರೂ. 10.00 ಲಕ್ಷಗಳ ಅನುದಾನವನ್ನು ಕೆಳಕಂಡಂತೆ 03 ಕಂತುಗಳಲ್ಲಿ ಬಿಡುಗಡೆ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

1. ಮೊದಲನೇ ಕಂತು ರೂ. 5.00 ಲಕ್ಷಗಳು – ಒಡಂಬಡಿಕೆ ಪತ್ರ ಸಲ್ಲಿಸಿದ ಕೂಡಲೇ.
2. ಎರಡನೇ ಕಂತು ರೂ. 2.50 ಲಕ್ಷಗಳು – ಕ್ಷೇತ್ರ ಅಧ್ಯಯನ ಕಾರ್ಯ ಮುಗಿದ ಕೂಡಲೇ ಸಲ್ಲಿಸುವ ಪ್ರಗತಿ ವರದಿಗನುಗುಣವಾಗಿ
3. ಮೂರನೇ ಕಂತು ರೂ. 2.50 ಲಕ್ಷಗಳು – ಅಧ್ಯಯನ ಕಾರ್ಯದ ಅಂತಿಮ ವರದಿ ಸಲ್ಲಿಸಿದ ನಂತರ

ಮೇಲ್ಕಂಡ ವಿವರಗಳಂತೆ ಒಡಂಬಡಿಕೆ ಪತ್ರಕ್ಕನುಗುಣವಾಗಿ ದಿನಾಂಕ: 13/11/2020 ರಂದು ಮೊದಲನೇ ಕಂತಿನ ಅನುದಾನ ರೂ. 5.00 ಲಕ್ಷ ಮತ್ತು ದಿನಾಂಕ: 21/04/2021 ರಂದು ಎರಡನೇ ಕಂತಿನ ಅನುದಾನ ರೂ. 2.50 ಲಕ್ಷಗಳನ್ನು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಬಿಡುಗಡೆ ಮಾಡಲಾಗಿದೆ.

ಉಲ್ಲೇಖ (2)ರ ಪತ್ರದೊಂದಿಗೆ ಅಂತಿಮ ವರದಿಯ ಪ್ರತಿಗಳನ್ನು ಸಲ್ಲಿಸಿರುವುದರಿಂದ ಒಡಂಬಡಿಕೆ ಪತ್ರಕ್ಕನುಗುಣವಾಗಿ ಮೂರು ಮತ್ತು ಅಂತಿಮ ಕಂತಿನ ಅನುದಾನ ರೂ. 2.50 ಲಕ್ಷಗಳನ್ನು ಕುಲಸಚಿವರು ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಮೊತ್ತವನ್ನು ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ರವರಿಗೆ ಕೆಳಕಂಡ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಿ ಈ ವೆಚ್ಚವನ್ನು ಬ್ಯಾಂಕ್ ಆಫ್ ಬರೋಡ, ಕುವೆಂಪುನಗರ ಶಾಖೆ, ಮೈಸೂರು ಇಲ್ಲಿನ ಉಳಿತಾಯ ಖಾತೆಯಲ್ಲಿರುವ ಸಂಬಂಧಿಸಿದ ಬಾಬ್ತಿನಿಂದ ಭರಿಸಲು ಅನುಮೋದಿಸಿ ಆದೇಶಿಸಿದೆ.

| Sl. No. | Name | Bank Name & Branch | Account No. | IFSC Code |
|---|---|---|---|---|
| 1 | Finance Officer<br>University of Mysore | SBI,<br>University Campus Br. | SB A/c No.<br>54007591437 | SBIN0040059 |

ನಿರ್ದೇಶಕರು,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,
ಮೈಸೂರು.

**ಪ್ರತಿಗಳು:**

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ ಮತ್ತು ಅನುದಾನ ಬಳಕೆ ಪ್ರಮಾಣ ಪತ್ರವನ್ನು ಕಳುಹಿಸಲು ಕೋರಿದೆ.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
3. ಪ್ರೊ. ಮಾರುತಿ ಟಿ.ಅರ್., ಪ್ರಾಧ್ಯಾಪಕರು ಮತ್ತು ಮುಖ್ಯ ಸಂಶೋಧಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ,
4. ಕಚೇರಿ ಪ್ರತಿ.